Crl Mis : 213 /2024
ಪಿಡಬ್ಲ್ಯೂ - 01

ದಿನಾಂಕಃ 06-09-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಎದುರುದಾರರ ಪರ ಎ.ಆರ್.ಆರ್ ವಕೀಲರಿಂದಃ**

ನಾನು ಕೂಲಿ ಕೆಲಸ ಮಾಡುತ್ತೇನೆ . ನಮ್ಮ ಮನೆಯಲ್ಲಿ ನಾನು , ನನ್ನ ತಂದೆ , ನನ್ನ ತಂಗಿ , ನನ್ನ ತಮ್ಮ ಮತ್ತು ನನ್ನ ಮಕ್ಕಳು ವಾಸವಾಗಿರುತ್ತೇವೆ . ನನ್ನ ಮನೆಯಿಂದ ಅರ್ಜಿದಾರರಾದ ಪೂರ್ಣಿಮರವರ ಮನೆ 3 ಕಿಲೋ ಮೀಟರ್ ದೂರದಲ್ಲಿ ಇದೆ . ಅರ್ಜಿದಾರರಾದ ಪೂರ್ಣಿಮ ಆಗಾಗ್ಗೆ ನಮ್ಮ ಮನೆಗೆ ಬಂದು ಹೋಗುತಿದ್ದರು ಎಂದರೆ ಸರಿ . ಅದೇ ರೀತಿ ರಾತ್ರಿ ಸಮಯ ನಮ್ಮ ಮನೆಯಲ್ಲಿ ಉಳಿದುಕೊಂಡು ಬೆಳಿಗ್ಗೆ ಹೋಗುತಿದ್ದರು ಎಂದರೆ ಸರಿ . ಆಗಾಗ್ಗೆ ನಮ್ಮ ಮನೆಯಲ್ಲೇ ಉಳಿದುಕೊಂಡು ಅವರು ಕೆಲಸಕ್ಕೆ ಹೋಗುತಿದ್ದರು ಎಂದರೆ ಸರಿಯಲ್ಲ. ಅರ್ಜಿದಾರರಾದ ಪೂರ್ಣಿಮ ರವರು ನಮ್ಮ ಮನೆಗೆ ಬಂದು ಆಗಾಗ್ಗೆಇರುತಿದ್ದ ಬಗ್ಗೆ ನಾವು ಆಕ್ಷೇಪಣೆ ಮಾಡುತ್ತಿರಲಿಲ್ಲ ಕಾರಣ ಆಕೆ ಹಿರಿಯ ಅಕ್ಕ ಆಗಿದ್ದರು, ನಮ್ಮ ತಂದೆ ಅವರಿಗೆ ವಿಶೇಷ ಗೌರವ ಕೊಡುತಿದ್ದರು ಎಂದು ತಿಳಿಸಿರುತ್ತಾರೆ . ನಾವು ಇನ್ನೂ ವಿಭಾಗವಾಗಿಲ್ಲ . ನಮಗೆ ಒಟ್ಟು 3 ಸೆಂಟ್ಸ್ ಜಾಗ ಇರುತ್ತದೆ . ನನ್ನ ಭಾವ ಅಶೋಕ ರವರ ಮನೆಗೆ ಯಾರೆಲ್ಲಾ ಬಂದು ಹೋಗುತಿದ್ದರು ಎಂದು ನಾನು ತಿಳಿದುಕೊಂಡಿಲ್ಲ . ನನ್ನ ಭಾವ ಅಶೋಕ ಮತ್ತು ಅವರ ಅಣ್ಣ ತಮ್ಮಂದಿರ ನಡುವೆ ಯಾವುದೇ ಬಿನ್ನಾಭಿಪ್ರಾಯ ಇರಲಿಲ್ಲ ಎಂದರೆ ಮೊದಲು ಭಿನ್ನಾಬಿಪ್ರಾಯ ಇರಲಿಲ್ಲ ಈಗ ಬಿನ್ನಾಭಿಪ್ರಾಯ ಇದೆಯೋ ಇಲ್ಲವೋ ಗೊತ್ತಿಲ್ಲ . ನನ್ನ ಅಕ್ಕ ನನ್ನ ಭಾವ ಜೀವನ್ ಮತ್ತು ಅವರ ಮಕ್ಕಳ ಜೊತೆ ಮೊದಲು ಮತಾನಾಡುತಿದ್ದರು. ಈಗ ಮಾತನಾಡುತಿದ್ದಾರೋ ಇಲ್ಲವೋ ಗೊತ್ತಿಲ್ಲ. ನನ್ನ ಅಕ್ಕ ಎದುರುದಾರರಾದ ಅಶೋಕ್ ಕುಮಾರ್ ರವರಿಗೆ ಅಂದರೆ ಗಂಡನಿಗೆ ಅವರ ಅತ್ತಿಗೆಯ ಜೊತೆ ಅಂದರೆ ಜೀವನ್ ರವರ ಹೆಂಡತಿಯ ಜೊತೆ ಅಕ್ರಮ ಸಂಬಂಧ ಇದೆ ಎಂದು ಅಪವಾದ ಮಾಡುತಿದ್ದರು ಎಂದರೆ ಸರಿಯಲ್ಲ . ಆ ರೀತಿ ಅಕ್ರಮ ಸಂಬಂಧ ಇದ್ದರೇ ನನ್ನ ಅಕ್ಕ ಗಂಡನ ಮನೆಯಲ್ಲಿ ಜೀವನ ನಡೆಸುತ್ತಿರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ

ಮುಂದುವರಿದು ಮಗು ಇರುವುದರಿಂದ ಜೀವನ ನಡೆಸುವ ಪರಿಸ್ಥಿತಿ ಇತ್ತು ಎಂದು ತಿಳಿಸಿರುತ್ತಾರೆ . ನನ್ನ ಭಾವ ನನ್ನ ಅಕ್ಕನ ವಿರುದ್ದ ವಿವಾಹ ವಿಚ್ಛೇದನ ಕೋರಿ ಅರ್ಜಿ ಸಲ್ಲಿಸಿರುವ ವಿಷಯ ನನಗೆ ಗೊತ್ತು . ನನ್ನ ಅಕ್ಕ ನನ್ನ ಭಾವ ಮನೆಯ ಗೃಹ ಪ್ರವೇಶ ಇರುವ ದಿನ ಹೋಗಿ ಗಲಾಟೆ ಮಾಡಿದ ಬಗ್ಗೆ ನನಗೆ ಗೊತ್ತು . ನಾನು ಸದ್ರಿ ಗೃಹಪ್ರವೇಶಕ್ಕೆ ಹೋಗಿಲ್ಲ . ನನಗೆ ಅವರು ಕರೆಯಿಲಿಲ್ಲ ಎಂದರೆ ಸರಿ . ನನ್ನ ಭಾವನಿಗೆ ನನ್ನ ಅಕ್ಕನ ಜೊತೆ ದಾಂಪತ್ಯ ಜೀವನ ನಡೆಸಲು ಇಷ್ಟ ಇಲ್ಲ ಎಂದರೆ ಸಾಕ್ಷಿ ಅವರು ಒಟ್ಟಿಗೆ ಇರಬೇಕು ಎಂದು ನಮ್ಮ ಆಸೆ ಕಾರಣ ಒಂದು ಮಗು ಇರುತ್ತದೆ ಎಂದು ತಿಳಿಸಿರುತ್ತಾರೆ . ನನ್ನ ಅಕ್ಕನಿಗೂ ನನ್ನ ಭಾವನ ಜೊತೆ ಜೀವನ ನಡೆಸುವ ಇಷ್ಟ ಇಲ್ಲ ಎಂದರೆ ಸರಿಯಲ್ಲ . ಮನೆ ಬೇಕು ಎಂಬ ಕಾರಣದಿಂದ ಮಾತ್ರ ಈ ಅರ್ಜಿ ಹಾಕಿರುತ್ತಾರೆ ಎಂದರೆ ಸರಿಯಲ್ಲ . ನನ್ನ ಅಕ್ಕ ಈಗ ಇರುವ ಬಾಡಿಗೆ ಮನೆಯಲ್ಲಿ ಚೆನ್ನಾಗಿ ಇರುತ್ತಾರೆ ಎಂದರೆ ಸರಿಯಲ್ಲ. ಬಾಡಿಗೆ ಮನೆ ಬಿಟ್ಟು ಬಂದ ಬಗ್ಗೆ ದಾಖಲೆ ಇಲ್ಲ . ಈಗಲೂಕೂಡ ಅರ್ಜಿದಾರಳಾದ ನನ್ನ ಅಕ್ಕ ಬಾಡಿಗೆ ಮನೆಯಲ್ಲಿ ಚೆನ್ನಾಗಿ ವಾಸ ವಾಗಿದ್ದಾರೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

(ತೆರದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಎಂದು ಒಪ್ಪಿದರು.

ಪ್ರ.ಹಿ.ಸಿ.ನ್ಯಾ ಮತ್ತು ಸಿ.ಜೆ.ಎಂ
ಉಡುಪಿ.